ಹೈನುಗಾರಿಕೆಗೆ ಪೂರಕ ಜಲಕೃಷಿ (ಹೈಡ್ರೋಪೋನಿಕ್ಸ್)

ಅರ್ಜುನ ಸೂಲಗಿತ್ತಿ ಮತ್ತು ಬಿ. ಕೆ. ಲೋಕೇಶ

ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ, ಅರಭಾವಿ – 591 218

☎: 9448119022 **ಮಿಂಚಂಚೆ:** arjunrs5138@gmail.com

ಬೇಸಾಯಕ್ಕೆ ಲಭ್ಯವಿರುವ ಭೂಮಿಯು ದಿನೇ ದಿನೇ ಕಡಿಮೆಯಾಗುತ್ತ ನಡೆದಿದೆ. ಹೈನುಗಾರಿಕಾ ಕ್ಷೇತ್ರದಲ್ಲಿ ಹಸಿರು ಮೇವಿನ ಬೇಡಿಕೆಯು ಹೆಚ್ಚುತ್ತಿದೆ. ಆಶಾದಾಯಕ ಉದ್ಯಮವಾಗಿರುವ ಪಶುಪಾಲನೆಗೆ ಕ್ಷಿಪ್ರ ಗತಿಯಲ್ಲಿ ಹಸಿರು ಮೇವು ಬೇಕಾಗುತ್ತದೆ. ಕಡಿಮೆ ಅವಧಿಯಲ್ಲಿ ಹೈನದ ದನಗಳಿಗೆ ಹಸಿರು ಮೇವು ಒದಗಿಸುವ ನೂತನ ತಂತ್ರಜ್ಞಾನ ಈಗ ಜನಪ್ರಿಯವಾಗುತ್ತಿದೆ. ಆದರೆ ಜಲ ಕೃಷಿಯ ಆರ್ಥಿಕತೆ ಹಾಗೂ ಲೆಕ್ಕಾಚಾರ ನಿಖರವಾಗಿ ಇತ್ಯರ್ಥ ಆಗಬೇಕಾಗಿದೆ. ಅಲ್ಲದೆ ಜಲಕೃಷಿಯಿಂದ ಪಶು ಆಹಾರವನ್ನು ಸಂಪೂರ್ಣವಾಗಿ ಹಾಗೂ ಸಮರ್ಥನೀಯವಾಗಿ ಬೆಳೆಯಬಹುದೆ ಎಂಬುದು ಚರ್ಚೆಗೆ ಬಿಟ್ಟ ವಿಷಯು ಹಾಗೂ ಈ ಪದ್ಧತಿ ಅಳವಡಿಸಿಕೊಂಡು ಯಶಸ್ವಿಯಾಗಿರುವ ಪಶುಪಾಲಕರ ಅಭಿಪ್ರಾಯಗಳೂ ಪ್ರಮುಖವಾಗುವವು. ಲೇಖಕರ ಅಭಿಪ್ರಾಯ ಓದಿ ಅನಿಸಿಕೆಯನ್ನು ಖಂಡಿತಾ ತಿಳಿಸಿ.

ಜಲಕೃಷಿ (ಹೈಡ್ರೋಪೋನಿಕ್ಸ್) ಎಂದರೆ ಯಾವುದೇ ರೀತಿಯ ಮಣ್ಣಿನ ಅವಲಂಬನೆ ಇಲ್ಲದೆ, ಕೇವಲ ನೀರು ಮತ್ತು ಪೋಷಕಾಂಶಗಳ ಸಹಾಯದಿಂದ ಕಡಿಮೆ ಖರ್ಚು, ಸ್ಥಳ ಮತ್ತು ಪೌಷ್ಠಿಕಾಂಶಭರಿತ ಪಶು ಆಹಾರ ಬೆಳೆಯುವ ಒಂದು ವಿಧಾನವಾಗಿದೆ, ಜಲಕೃಷಿಯಿಂದ ಮೇವು ಬೆಳೆಯುವ ವಿಧಾನವನ್ನು ಸಾಂಪ್ರದಾಯಿಕ ವಿಧಾನಗಳಿಗೆ ಹೋಲಿಸಿದರೆ ಜಲಕೃಷಿ ಮೇವು ಕಡಿಮೆ ಸಮಯದಲ್ಲಿ ತಯಾರಿಸಿ ಪಶುಗಳಿಗೆ ಸಾವಯವ ಆಹಾರ ನೀಡುವುದರ ಮೂಲಕ ಹೈನುಗಾರಿಕೆಯನ್ನು ಅತ್ಯಂತ ಸರಳ ಮತ್ತು ಚೆನ್ನಾಗಿ ಮಾಡಬಹುದು ಎಂಬುಹುದನ್ನು ತೋರಿಸುತ್ತದೆ.

ಭೂಮಿಯಲ್ಲಿ ಕನಿಷ್ಠ 1 ಕಿ.ಗ್ರಾಂ ಮೇವು ಬೆಳೆಯಲು 80 ರಿಂದ 100 ಲೀಟರ್ ನೀರು ಮತ್ತು 60 ರಿಂದ 90 ದಿನಗಳ ಅವಧಿ ಬೇಕಾಗುತ್ತದೆ ಆದರೆ ಜಲಕೃಷಿ ವಿಧಾನವನ್ನು ಬಳಸಿ 1 ಕಿ.ಗ್ರಾಂ ಮೇವು ಬೆಳೆಯಲು 2 ರಿಂದ 3 ಲೀಟರ್ ನೀರು ಮತ್ತು ಕೇವಲ 8 ರಿಂದ 10 ದಿನಗಳಲ್ಲಿ ಮೇವು

ಬೆಳೆಯಬಹುದಾಗಿದೆ. ಹೈನುಗಾರಿಕೆಯಲ್ಲಿ ಪಶುಗಳಿಗೆ ಬಳಸುವ ಹಿಂಡಿಗೆ ಪರ್ಯಾಯವಾಗಿಯೂ ಇದನ್ನು ಬಳಸಬಹುದು. ಜಲಕೃಷಿ (ಹೈಡ್ರೋಪೋನಿಕ್ಸ್) ಘಟಕದ ಮೂಲಕ ಬೆಳೆಯುವ ಮೊಳಕೆ ಕಾಳಿನಲ್ಲಿ ಪ್ರೋಟಿನ್, ವಿಟಮಿನ್ಸ್ ಎ, ಸಿ, ಡಿ, ಕೆ, ಖನಿಜಾಂಶಗಳು ಹಾಗೂ ಕಿಣ್ವಗಳು ಸಿಗುತ್ತವೆ, ಇದರಿಂದ ಪಶುಗಳಿಗೆ ಕ್ಯಾಲ್ಶಿಯಂನ್ನು ಪ್ರತ್ಯೇಕವಾಗಿ ಖರೀದಿಸಿ ಕೊಡುವುದನ್ನು ನಿಲ್ಲಿಸಬಹುದು ಅಲ್ಲದೆ, ಈ ಮೇವಿನಿಂದ ಎಲ್ಲ ತರಹದ ವಿಟಮಿನ್‌ಗಳು ಸಿಗುವುದರಿಂದ ಬರುಡು ದನಗಳಿಗೆ ಗರ್ಭಧಾರಣೆಗೆ ಉಪಯುಕ್ತವಾಗಿದೆ.

ಅ. ಜಲಕೃಷಿ (ಹೈಡ್ರೋಪೋನಿಕ್ಸ್) ವಿಧಾನ

- ಜಲಕೃಷಿ (ಹೈಡ್ರೋಪೋನಿಕ್ಸ್) ಘಟಕ ಸ್ಥಾಪಿಸಲು ಮೊದಲು 10 x 10 ಅಡಿಯ ನೆರಳು ಪರದೆಯ ಮನೆ ನಿರ್ಮಿಸಿ ಅದರಲ್ಲಿ 6 ಅಡಿ ಉದ್ದ, 8 ಅಡಿ ಅಗಲದ ಎಂಟು ಭಾಗಗಳನ್ನು ಮಾಡಿಕೊಂಡು 1.5 ಅಡಿ ಉದ್ದದ 9 ಟ್ರೇಗಳು ಹಿಡಿಯುವಂತೆ ಘಟಕವನ್ನು ಸ್ಥಾಪಿಸಬೇಕು (ಪಶುಗಳ ಸಂಖ್ಯೆಯ ಆಧಾರದ ಮೇಲೆ ಜಲಕೃಷಿ ಘಟಕದ ಅಳತೆ (ಸೈಜ್) ಬದಲಾವಣೆಯಾಗುತ್ತದೆ.)

- ಜಲಕೃಷಿ ಘಟಕದಲ್ಲಿ ದಿನನಿತ್ಯ 1 ಟ್ರೇನಲ್ಲಿ 250 ರಿಂದ 500 ಗ್ರಾಂ. ಕಾಳುಗಳನ್ನು ಬಳಸಬೇಕು. ಮೊದಲನೆಯ ದಿನ 24 ಘಂಟೆಗಳ ಕಾಲ ಗೋವಿನ ಜೋಳವನ್ನು ನೀರಿನಲ್ಲಿ ನೆನೆಹಾಕಿ ನಂತರ 24 ಘಂಟೆಗಳ ಕಾಲ ಮೊಳಕೆ ಬರಿಸಲು ತೋಯಿಸಿದ ಬಟ್ಟೆ ಅಥವಾ ಗೋಣಿಚೀಲದಲ್ಲಿ ಹಾಕಿ ಕಟ್ಟಿಡಬೇಕು.
- ತದನಂತರ ಮೊಳಕೆಯೊಡೆದ ಕಾಳುಗಳನ್ನು ಒಂದು ಟ್ರೇಗೆ 250 ರಿಂದ 500 ಗ್ರಾಂ ನಂತೆ ಮೊದಲನೆಯ ವಿಭಾಗದಲ್ಲಿ ಹಾಕಿ ಪ್ರತಿ ಒಂದು ಘಂಟೆಗೊಮ್ಮೆ ನೀರು ಸಿಂಪಡನೆ ಮಡುತ್ತಿರಬೇಕು ನಂತರ ಟ್ರೇಗಳನ್ನು ಒಂದು ವಿಭಾಗದಿಂದ ಇನ್ನೊಂದು ವಿಭಾಗಕ್ಕೆ ವರ್ಗಾಯಿಸುತ್ತಾ ಹೋಗಿ 9 ರಿಂದ 10 ನೇ ದಿನಕ್ಕೆ ಪೌಷ್ಠಿಕ ಮೇವು ತಯಾರಾಗುತ್ತದೆ.
- ಜಲಕೃಷಿ (ಹೈಡ್ರೋಪೋನಿಕ್ಸ್) ಘಟಕದಲ್ಲಿ ಪ್ರತಿ ಒಂದು ಘಂಟೆಗೆ 20 ಸೆಕೆಂಡಿನಂತೆ ಟೈಮರ ಅಳವಡಿಸಿ ಫಾಗರ ಮೂಲಕ ನೀರು ಸಿಂಪಡಣೆ ಮಾಡುತ್ತಿರಬೇಕು. ಪ್ರತಿದಿನ 30 ರಿಂದ 40 ಲೀಟರ ನೀರು ಖರ್ಚಾಗುತ್ತದೆ ಅಲ್ಲದೆ ಹೈಡ್ರೋಪೋನಿಕ್ಸ್‌ನಲ್ಲಿ ಕನಿಷ್ಠ 17 ರಿಂದ 25 ಡಿಗ್ರಿ ಸೆಲ್ಸಿಯಸ್ ತಾಪಮಾನವನ್ನು ಕಾಯ್ದುಕೊಳ್ಳಬೇಕು. ಏಕೆಂದರೆ 17 ಡಿಗ್ರಿ ಗಿಂತ ಕಡಿಮೆ ತಾಪಮಾನದಲ್ಲಿ ಬೆಳೆಸಿದರೆ ಬೆಳವಣಿಗೆ ಕಡಿಮೆಯಾಗುತ್ತದೆ ಮತ್ತು 25 ಡಿಗ್ರಿ ಸೆಲ್ಸಿಯಸ್‌ಕ್ಕಿಂತ ಹೆಚ್ಚಾದಲ್ಲಿ ತೇವಾಂಶ ಕಡಿಮೆಯಾಗಿ ಕಾಳುಗಳು ಒಣಗಿ ಮೊಳಕೆ ಪ್ರಮಾಣ ಕಡಿಮೆಯಾಗುತ್ತದೆ. ಆದ್ದರಿಂದ ಹವಾಮಾನಕ್ಕೆ ತಕ್ಕಂತೆ ಅವಶ್ಯಬಿದ್ದಾಗ ನೀರಿನ ಪ್ರಮಾಣದಲ್ಲಿ ವ್ಯತ್ಯಾಸ ಮಾಡಿಕೊಳ್ಳಬೇಕಾಗುತ್ತದೆ.

ಬ. ಜಲ ಕೃಷಿಯಿಂದಾಗುವ ಪ್ರಯೋಜನಗಳು

- ಜಲಕೃಷಿ ಮಾಡುವುದರಿಂದ ರೈತರು ತಾವೇ ಬೆಳೆದಂತಹ ಧಾನ್ಯಗಳನ್ನು ಉಪಯೋಗಿಸಿ ಮೇವನ್ನು ಬೆಳೆಯುವುದರಿಂದ ಜಲಕೃಷಿಗೆ ಬೇಕಾದ ಬೀಜಗಳನ್ನು ಕೊಂಡು ತರುವ ಅವಶ್ಯಕತೆ ಇರುವುದಿಲ್ಲ, ಇದರಿಂದ ರೈತರು ತಮ್ಮ ನೈಸರ್ಗಿಕ ಸಂಪನ್ಮೂಲಗಳನ್ನು ಸಂಪೂರ್ಣವಾಗಿ ಉಪಯೋಗಿಸಲು ಸಾಧ್ಯವಾಗುತ್ತದೆ.
- ಸರಾಸರಿ 1 ಕಿ.ಗ್ರಾಂ ಗೋವಿನಜೋಳ ಬಳಸಿ ನಾವು ಪ್ರತಿದಿನ ಪಶುಗಳಿಗೆ 8 ರಿಂದ 10 ಕಿ.ಗ್ರಾಂ ಮೇವನ್ನು ಉತ್ಪಾದಿಸಬಹುದು ಅಂದರೆ ಪ್ರತಿನಿತ್ಯ 9 ಟ್ರೇಗಳಲ್ಲಿ 4 ರಿಂದ 5 ಕಿ.ಗ್ರಾಂ ಗೋವಿನಜೋಳ ಹಾಕುವುದರಿಂದ 10 ನೇಯ ದಿನಕ್ಕೆ 50 ಕಿ.ಗ್ರಾಂ ಪೌಷ್ಠಿಕ ಮೇವನ್ನು ಬೆಳೆಯುದರಿಂದ ಹೈನುಗಾರಿಕೆ ಅನುಕೂಲಕರವಾಗಿದೆ.
- ಪ್ರಸ್ತುತ ಒಂದು ಕಿ.ಗ್ರಾಂ ಗೋವಿನಜೋಳದ ಬೆಲೆ 12 ರಿಂದ 15 ರೂಪಾಯಿಗಳಿದ್ದು ಇದರಿಂದ 8 ರಿಂದ 10 ಪಟ್ಟು ಮೇವು ಬೆಳೆಯುವುದರಿಂದ ಪ್ರತಿ ಕಿ.ಗ್ರಾಂ ಮೇವಿಗೆ 1.5 ರೂಪಾಯಿಗಳಾಗುತ್ತದೆ.
- ಜಲಕೃಷಿ ಮೂಲಕ ಮೇವನ್ನು ಬೆಳೆಯುವುದರಿಂದ ಹಸಿರು ಮೇವನ್ನು ವರ್ಷವಿಡಿ ಪಶುಗಳಿಗೆ ನೀಡಬಹುದು ಮತ್ತು ಹಸಿರು ಮೇವಿನಲ್ಲಿರುವ ಪೋಷಕಾಂಶಗಳನ್ನು ಹಾಳಾಗದಂತೆ ತಡೆಯಬಹುದು ಮತ್ತು ನೀರಿನ ಮೂಲಕ ಹೆಚ್ಚುವರಿ ಪೋಷಕಾಂಶಗಳನ್ನು ಕೊಟ್ಟು ಮೇವಿನ ಗುಣಮಟ್ಟವನ್ನು ಹೆಚ್ಚಿಸಬಹುದು.
- ಜಲಕೃಷಿಯಿಂದ ಬೆಳೆದ ಮೇವಿನಲ್ಲಿ ಹೆರಳವಾಗಿ ವಿಟಮಿನ್ಸ, ಖನಿಜಾಂಶ, ಕ್ಯಾಲ್ಸಿಯಂ ಮತ್ತು ಪ್ರೋಟಿನಗಳು ಇರುವುದರಿಂದ ಬರುಡು ದನಗಳ ಗರ್ಭಧಾರಣೆಗೆ ಉಪಯುಕ್ತವಾಗಿದೆ ಮತ್ತು ಅವುಗಳ ಪಚನಕ್ರಿಯೆ ಮತ್ತು ಪೋಷಕಾಂಶಗಳ ಪ್ರಮಾಣವನ್ನು ಕೂಡಾ ಹೆಚ್ಚಿಸುತ್ತದೆ.
- ಜಲಕೃಷಿ ಘಟಕವನ್ನು ರೈತರು ಮನೆಯ ಮಾಳಿಗೆಯ ಮೇಲೆ ಅಥವಾ ದನದ ಕೊಟ್ಟಿಗೆಯ ಹತ್ತಿರ ಅಥವಾ ಇತರೆ ನೆರಳಿರುವ ಸ್ಥಳಗಳಲ್ಲಿ ಅತಿ ಕಡಿಮೆ ಖರ್ಚಿನಲ್ಲಿ ನಿರ್ಮಿಸಬಹುದಾಗಿದೆ.
- ಇದರಲ್ಲಿ ಯಾವುದೇ ರೀತಿಯ ರಾಸಾಯನಿಕವನ್ನು ಬಳಸದೇ ಇರುವುದರಿಂದ ಇದು ಸಂಪೂರ್ಣ ಸಾವಯವ ಆಹಾರವಾಗಿದೆ.

ಈ ಮೇಲಿನ ಎಲ್ಲ ಕಾರಣಗಳಿಂದಾಗಿ ಇತ್ತೀಚಿನ ದಿನಗಳಲ್ಲಿ ಜಲಕೃಷಿ ಮೂಲಕ ಪಶುಗಳಿಗೆ ಮೇವನ್ನು

ಬೆಳೆಯುವುದು ಅತಿ ಅವಶ್ಯಕವಾಗಿದೆಯಲ್ಲದೆ ಅನಿವಾರ್ಯವು ಕೂಡಾ ಆಗಿದೆ ಮತ್ತು ಬಹಳಷ್ಟು ರೈತರು ಜಲಕೃಷಿಯಿಂದ ಮೇವಿನ ಬೆಳೆಗಳನ್ನು ಬೆಳೆದು ಯಶಸ್ವಿಯಾಗಿ ತಮ್ಮ ಹೈನುಗಾರಿಕೆಯನ್ನು ನಡೆಸುತ್ತಿದ್ದಾರೆ.

ಸಾಂಪ್ರದಾಯಿಕವಾಗಿ ಬೆಳೆದ ಗೋವಿನಜೋಳದ ಮೇವು ಮತ್ತು ಜಲಕೃಷಿ ಮೂಲಕ ಬೆಳೆದ ಗೋವಿನಜೋಳದ ಮೇವಿನಲ್ಲಿರುವ ಪೋಷಕಾಂಶಗಳ ಶೇಕಡಾವಾರು ಪ್ರಮಾಣವನ್ನು ಕೆಳಗಿನ ಕೋಷ್ಟಕದಲ್ಲಿ ಪಟ್ಟಿ ಮಾಡಿದೆ.

ಪೋಷಕಾಂಶಗಳು	ಸಾಂಪ್ರದಾಯಿಕವಾಗಿ ಬೆಳೆದ ಗೋವಿನಜೋಳದ ಮೇವು (ಶೇ.)	ಜಲಕೃಷಿ (ಹೈಡ್ರೋಪೋನಿಕ್ಸ್) ಮೂಲಕ ಬೆಳೆದ ಗೋವಿನಜೋಳದ ಮೇವು (ಶೇ.)
ಪ್ರೋಟಿನ್	10.67	13.57
ಕಚ್ಚಾ ನಾರು	25.92	14.07
ಸಾರಜನಕ ಮುಕ್ತ ಸಾರ	51.78	66.72
ಬೂದಿ	9.36	3.84
ಇತರ ಸಾರ	2.27	3.49
ಆಮ್ಲ ಕರಗಬಲ್ಲ ಬೂದಿ	1.40	0.33

****

ಮೇವಿನ ಸಮರ್ಥ ಬಳಕೆ

ರೈತರು ತಾವು ಬೆಳೆದ ಆಹಾರದ ಬೆಳೆಗಳನ್ನು ಒಕ್ಕಲು ಮಾಡಿದ ನಂತರ ಉಳಿದ ಹುಲ್ಲು, ಸೊಪ್ಪೆ, ಹೊಟ್ಟು ಮುಂತಾದ ತ್ಯಾಜ್ಯ ವಸ್ತುಗಳನ್ನು ತಮ್ಮ ಪಶುಗಳಿಗೆ ಮೇವಾಗಿ ಬಳಸುವುದು ಬಹುಸಾಮಾನ್ಯ ಪದ್ಧತಿಯಾಗಿದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಬೆಳೆಯ ಆಯ್ಕೆ ಮತ್ತು ಬೆಳೆಯುವ ವಿಧಾನಗಳಲ್ಲಿ ಸಾಕಷ್ಟು ಬದಲಾವಣೆಗಳಾಗಿದ್ದು ಹೆಚ್ಚಿನ ಮೇವಿನ ದೊರೆಯುವಿಕೆಯಲ್ಲಿ ಏರುಪೇರು ಉಂಟಾಗಿದೆ. ಹೆಚ್ಚಿನ ಇಳುವರಿಗೆ ಪ್ರಾಮುಖ್ಯತೆ ಕೊಡುತ್ತಿರುವುದರಿಂದ ಈ ಬೆಳೆಗಳಿಂದ ದೊರೆಯುತ್ತಿದ್ದ ಮೇವಿಗೆ ಹೆಚ್ಚಿನ ಗಮನ ಇಲ್ಲದಂತಾಗಿದೆ. ಒಂದು ಅಂಕಿ-ಅಂಶಗಳ ಪ್ರಕಾರ ಕರ್ನಾಟಕ ರಾಜ್ಯದಲ್ಲಿ, ಇತರೆ ಬೆಳೆಗಳಿಂದ ಬರುತ್ತಿದ್ದ ಮೇವಿನ ಪ್ರಮಾಣ ಕಡಿಮೆಯಾಗಿ, ಸರಿಸುಮಾರು ಶೇ. ೨೨ ಕೊರತೆ ಕಂಡು ಬಂದಿದೆ. ಕೇವಲ ಕೆಲವು ಜಿಲ್ಲೆಗಳಲ್ಲಿ ಮಾತ್ರ ಅವಶ್ಯಕತೆಗೆ ಅನುಗುಣವಾಗಿ ಮೇವಿನ ದೊರೆಯುವಿಕೆ ಉಪಲಬ್ಧವಾಗಿದೆ. ಇದರ ಜೊತೆ-ಜೊತೆ ಹೆಚ್ಚು ಹಾಲಿನ ಇಳುವರಿ ಕೊಡುವ ಆಕಳು ಮತ್ತು ಎಮ್ಮೆ ತಳಿಗಳ ಬಗ್ಗೆ ರೈತರು ಉತ್ಸಾಹ ತೋರುತ್ತಿದ್ದು, ಈ ತಳಿಗಳು ಹೆಚ್ಚಿನ ಮೇವನ್ನು ಬಯಸುವುದರಿಂದ ಮೇವಿನ ಕೊರತೆ ಸಂದರ್ಭದಲ್ಲಿ ಇವುಗಳ ಹಾಲಿನ ಉತ್ಪಾದನೆಯಲ್ಲಿ ವ್ಯತ್ಯಯ ಉಂಟಾಗುತ್ತದೆ. ಮೇವಿನ ಕೊರತೆ ವಿಶೇಷವಾಗಿ ಮುಂಗಾರಿನ ನಂತರ ಶುರುವಾಗಿ ಬೇಸಿಗೆಯಲ್ಲಿ ಉಲ್ಬಣಗೊಳ್ಳುತ್ತದೆ. ಅದೇ ತೆರನಾಗಿ ಹಾಲಿನ ಇಳುವರಿಯಲ್ಲಿಯೂ ಕೂಡ ಗಣನೀಯ ಕುಸಿತ ಕಂಡು ಬರುತ್ತದೆ. ಮೇವಿನ ಕೊರತೆ ಇದ್ದ ಸಂದರ್ಭದಲ್ಲಿ, ತಕ್ಷಣ ಉತ್ಪಾದನೆ ಅಸಾಧ್ಯವಾಗಿದ್ದು, ನಮ್ಮಲ್ಲಿ ದೊರೆಯುವ ಅಥವಾ ಉಪಲಬ್ಧವಿರುವ ಮೇವನ್ನು ಅತಿ ಸಮರ್ಥವಾಗಿ ಬಳಸುವ ಬಗ್ಗೆ ಎಲ್ಲರೂ ಗಮನ ಹರಿಸಬೇಕಿದೆ. ಇವುಗಳಲ್ಲಿ ಪ್ರಮುಖವಾಗಿ ಮೇವಿನ ಸಂರಕ್ಷಣೆ, ಮೇವು ಬಳಕೆ ವಿಧಾನಗಳು ಮತ್ತು ಮೇವು ಪೋಲಾಗದಂತೆ ತಡೆಯುವ ಕ್ರಮಗಳ ಬಗ್ಗೆ ಹೆಚ್ಚಿನ ಒತ್ತು ಕೊಡಬೇಕಾಗಿದೆ.

(ಆಧಾರ: ಸುಧಾರಿತ ಪಶುಪಾಲನಾ ಪದ್ಧತಿಗಳು, ೨೦೧೭)